ಈ) ಇಂಗ್ಲೀಷ್ ಮಾಧ್ಯಮದಲ್ಲಿ.

ಉ) ಸರ್ಕಾರದ ಭಾಷಾ ಮಾಧ್ಯಮ ನೀತಿಯನ್ನು ಉಲ್ಲಂಘಿಸಿದ ಶಾಲೆಗಳ ಮಾನ್ಯತೆಯನ್ನು ಹಿಂಪಡೆಯಲು ಸಕ್ಷಮ ಪ್ರಾಧಿಕಾರಗಳು ತೆಗೆದುಕೊಂಡ ಕ್ರಮದಿಂದ ಉದ್ಭವಿಸಿದ ಪರಿಸ್ಥಿತಿಯನ್ನು ಪರಿಶೀಲಿಸಿ, ಸಚಿವ ಸಂಪುಟಕ್ಕೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಈ ರೀತಿ ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

2016 (2380) ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರವನ್ನೊಳಗೊಂಡಂತೆ, ರಾಜ್ಯದ ವಿವಿಧ ಭಾಗಗಳಲ್ಲಿ ಹೊಸದಾಗಿ ಮಂಜೂರಾಗಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಆ ಪೈಕಿ ಬೆಂಗಳೂರು ನಗರಕ್ಕೆ ಮತ್ತು ಹಾಸನ ಜಿಲ್ಲೆಗೆ ಮಂಜೂರಾದ ಕಾಲೇಜುಗಳೆಷ್ಟು (ಸ್ಥಳ, ಹೆಸರು ಸಹಿತ ಸಂಖ್ಯೆ ವಿವರ ನೀಡುವುದು);

ಆ) ಈ ಕಾಲೇಜುಗಳನ್ನು ಯಾವ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗಿದೆ, ಮಂಜೂರಾತಿಯಾಗಿದ್ದು ಯಾವಾಗ;

ಇ) ಇವು ಹಾಲಿ ಕಾರ್ಯಾರಂಭಗೊಂಡಿವೆಯೇ ಇದಕ್ಕಾಗಿ ನೀಡಿರುವ ಹಣವೆಷ್ಟು ಹಾಗೂ ಇವುಗಳಿಗೆ ಕಟ್ಟಡಸೌಲಭ್ಯ ಕಲ್ಪಿಸಲಾಗಿದೆಯೇ ಇಲ್ಲದಿದ್ದಲ್ಲಿ ಯಾವ ವ್ಯವಸ್ಥೆ ಮಾಡಲಾಗಿರುತ್ತದೆ;

ಈ) ಈ ಕಾಲೇಜುಗಳಿಗೆ ಸ್ವಂತ ಕಟ್ಟಡಗಳನ್ನು ಯಾವಾಗ ನಿರ್ಮಿಸಲಾಗುತ್ತದೆ ಅಲ್ಲದೇ ಇವುಗಳಿಗೆ ಅಗತ್ಯ ಬೋಧಕ, ಗ್ರಂಥಪಾಲಕರು ಸೇರಿದಂತೆ ಇತರೆ ಬೋಧಕೇತರ ಸಿಬ್ಬಂದಿಗಳನ್ನು ಹುದ್ದೆ ಸಮೇತ ಮಂಜೂರಾತಿ ಮಾಡಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು;

ಉ) ಈ ನಿಟ್ಟಿನಲ್ಲಿ ಬೆಂಗಳೂರಿನಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಈ ಹಿಂದಿನ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಎರಡೆರಡು ಗ್ರಂಥಪಾಲಕರ ಹುದ್ದೆಗಳಿರುವುದು ನಿಜವೇ;

ಊ) ಹಾಗಿದ್ದಲ್ಲಿ, ಈ ಹುದ್ದೆಗಳು ಪ್ರಸ್ತುತ ಚಾಲ್ತಿಯಲ್ಲಿವೆಯೇ ಆ ಹುದ್ದೆಗಳೆಷ್ಟು, ಅವುಗಳನ್ನು ಬೇರೆ ಕಾಲೇಜು ಸ್ಥಳಕ್ಕೆ ಸ್ಥಳಾಂತರಿಸಿ ಆದೇಶ ಮಾಡಲಾಗಿದೆಯೇ;

ಋ) ಮಾಡದಿದ್ದಲ್ಲಿ, ಎಲ್ಲಿಗೆ ವರ್ಗಾವಣೆ ಮಾಡಲಾಗಿರುತ್ತದೆ;

ಋೂ) ಇದಕ್ಕೆ ಕಾರಣಗಳೇನು (ಸಂಪೂರ್ಣ ವಿವರ ಒದಗಿಸುವುದು)?

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) :

ಅ) 2006–07ನೇ ಸಾಲಿನಲ್ಲಿ ಒಟ್ಟು 15 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ. ಆ ಪೈಕಿ ಬೆಂಗಳೂರು ನಗರಕ್ಕೆ ಯಾವುದೇ ಹೊಸ ಕಾಲೇಜು ಮಂಜೂರಾಗಿಲ್ಲ. ಹಾಸನ ಜಿಲ್ಲೆಯಲ್ಲಿ ಹಾಸನ ನಗರಕ್ಕೆ ಮಹಿಳಾ ಕಾಲೇಜು, ಅರಸೀಕೆರೆ, ಪಡುವಲಹಿಪ್ಪ ಮತ್ತು ಹೊಳೆನರಸೀಪುರ (ಮಹಿಳಾ) ಇಲ್ಲಿ ಒಂದೊಂದು ಕಾಲೇಜನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

ಆ) 2006–07ನೇ ಸಾಲಿನಲ್ಲಿ ಮಂಜೂರಾತಿ ನೀಡಲಾಗಿದ್ದು ಅದೇ ಸಾಲಿನಲ್ಲಿ ಪ್ರಾರಂಭವಾಗಿದೆ.

ಇ) ಈ ಕಾಲೇಜುಗಳು ಈಗಾಗಲೇ ಕಾರ್ಯ ನಿರ್ವಹಿಸುತ್ತಿವೆ. 2006–07ನೇ ಸಾಲಿನಲ್ಲಿ ಪ್ರತಿ ಕಾಲೇಜಿಗೆ ರೂ.49.50 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಸದರಿ ಮೊತ್ತದಲ್ಲಿ ಪ್ರತಿ ಕಾಲೇಜಿನ ಕಟ್ಟಡ ಕಾಮಗಾರಿಗಳಿಗೆ ರೂ.35.00 ಲಕ್ಷಗಳ ಮೊತ್ತದ ಅನುದಾನ ಒದಗಿಸಲಾಗಿತ್ತು.

ಈ) 2006–07ನೇ ಸಾಲಿನಲ್ಲಿ ಮಂಜೂರಾದ 15 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪೈಕಿ 03 ಕಾಲೇಜುಗಳಿಗೆ ಈಗಾಗಲೇ ಕಟ್ಟಡ ನಿರ್ಮಿಸಲಾಗುತ್ತಿದೆ. ಅಂತಹ 04 ಕಾಲೇಜುಗಳಿಗೆ ನಿವೇಶನ ಲಭ್ಯವಿದ್ದು, ಉಳಿದ 08 ಕಾಲೇಜುಗಳಿಗೆ ನಿವೇಶನ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಅದಲ್ಲದೆ 2007–08ನೇ ಸಾಲಿಗೆ ಪ್ರತಿ ಕಾಲೇಜಿನ ಕಟ್ಟಡ ಕಾಮಗಾರಿಗಳಿಗೆ ರೂ. 35.00 ಲಕ್ಷಗಳ ಮೊತ್ತದ ಆಯವ್ಯಯ ಒದಗಿಸಿಕೊಳ್ಳಲಾಗಿದ್ದು, ಪ್ರತಿ ಕಾಲೇಜಿಗೆ ಈ ಕೆಳಕಂಡಂತೆ ಬೋಧಕ ಹಾಗೂ ಬೋಧಕೇತರ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

ಬೋಧಕರು		**ಬೋಧಕೇತರರು**	
ಪ್ರಾಂಶುಪಾಲರು	01	ಗ್ರಂಥಪಾಲಕರು	01
		ಅಧೀಕ್ಷಕರು	01
ಉಪನ್ಯಾಸಕರು	12	ಪ್ರ.ದ.ಸ	01
ದೈಹಿಕ ಶಿಕ್ಷಣ ಬೋಧಕರು	01	ಬೆರಳಚ್ಚುಗಾರರು	01
		ಗ್ರಂ.ಸಹಾಯಕರು	01
ಒಟ್ಟು	**14**	ಅಟೆಂಡರ್	03
		ಪರಿಚಾರಕರು	03
		ಒಟ್ಟು	**11**

ಊ) ಬೆಂಗಳೂರಿನ ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಇಲ್ಲಿ ಮಾತ್ರ ಎರಡು ಗ್ರಂಥಪಾಲಕರ ಹುದ್ದೆಗಳಿದ್ದು, ಬೆಂಗಳೂರಿನ ಇತರೆ ಸರ್ಕಾರಿ ಕಾಲೇಜುಗಳಲ್ಲಿ ಒಂದೊಂದು ಗ್ರಂಥಪಾಲಕರ ಹುದ್ದೆ ಇರುತ್ತದೆ.

ಊ) ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬೆಂಗಳೂರು ಇಲ್ಲಿ ಸುಮಾರು 3500ಕ್ಕೂ ಹೆಚ್ಚಿನ ವಿದ್ಯಾರ್ಥಿನಿಯರು ವಿದ್ಯಾಭ್ಯಾಸ ಮಾಡುತ್ತಿದ್ದು ಎರಡು ಗ್ರಂಥಪಾಲಕರ ಹುದ್ದೆಗಳು ಬೇಕಾಗಿರುವ ಕಾರಣ ಗ್ರಂಥಪಾಲಕರ ಹುದ್ದೆಯನ್ನು ಬೇರೆ ಸರ್ಕಾರಿ ಕಾಲೇಜಿಗೆ ಸ್ಥಳಾಂತರಿಸಲಾಗಿರುವುದಿಲ್ಲ.

ಋ) ಉದ್ಭವಿಸುವುದಿಲ್ಲ.

ಋೂ) ಉದ್ಭವಿಸುವುದಿಲ್ಲ.

2017 (1674) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005–06ನೇ ಮತ್ತು 2006–07ನೇ ಸಾಲುಗಳಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿಯಲ್ಲಿ ರಾಜ್ಯಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು;

ಆ) ಈ ಯೋಜನೆಯಲ್ಲಿ ಪ್ರತಿ ಜಿಲ್ಲೆಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಹಣವನ್ನು ಬಿಡುಗಡೆ ಮಾಡಿದೆ;

ಇ) ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿವೆಯೇ?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ವ ಶಿಕ್ಷಣ ಅಭಿಯಾನ ಯೋಜನೆಗಾಗಿ 2005–06ನೇ ಸಾಲಿಗೆ ರೂ.42230.130 ಲಕ್ಷಗಳು ಮತ್ತು 2006–07ನೇ ಸಾಲಿನಲ್ಲಿ ರೂ.71532.221 ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಆ) ಈ ಯೋಜನೆಯಲ್ಲಿ, ಅನುಮೋದಿತವಾಗಿರುವ ಕಾಮಗಾರಿವಾರು ಜಿಲ್ಲಾವಾರು ವಿವರಗಳನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ.

ಇ) ಚಟುವಟಿಕೆವಾರು ಕಾಮಗಾರಿಗಳ ಪ್ರಗತಿಯ ವಿವರವನ್ನು ಅನುಬಂಧ – 2 ರಲ್ಲಿ ಲಗತ್ತಿಸಿದೆ.